# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು–575 003.

Website : www.ramakrishnacredit.com Email : ho@ramakrishnacredit.com

ಸಂಪುಟ : IX ಸಂಚಿಕೆ : 1 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಎಪ್ರಿಲ್ –ಜೂನ್ 2024


## ಅಧ್ಯಕ್ಷರ ಮಾತು

### ಕೃತಜ್ಞತೆಗಳು

**ರೂ.1000 ಕೋಟಿ ಮೀರಿದ ಒಟ್ಟು ವ್ಯವಹಾರ ದಾಖಲಿಸಿ ಸಾಧನೆಯ ಹಾದಿಯಲ್ಲಿ ಹೊಸ ಮೈಲುಗಲ್ಲು ದಾಟಿದ ನಮ್ಮ ಸಂಘ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ಲಿ.**



ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

ರಾಜ್ಯದ ಮುಂಚೂಣಿಯ ಕ್ರೆಡಿಟ್ ಸಹಕಾರ ಸಂಘವಾದ ನಮ್ಮ ಸಂಘವು ದಿನಾಂಕ 30.06.2024ಕ್ಕೆ ಠೇವಣಿ ರೂ.536 ಕೋಟಿ ಹಾಗೂ ಸಾಲ ರೂ.465 ಕೋಟಿಗಳೊಂದಿಗೆ ರೂ.1001 ಕೋಟಿ ಮೀರಿದ ಒಟ್ಟು ವ್ಯವಹಾರವನ್ನು ದಾಖಲಿಸಿದ್ದು, ಸ್ಥಾಪನೆಯ 30 ವರ್ಷಗಳ ಅವಧಿಯಲ್ಲಿ ಸಹಕಾರ ರಂಗದಲ್ಲಿ ಈ ಸಾಧನೆಯನ್ನು ಮಾಡಿದ ಅವಿಭಜಿತ ದ.ಕ. ಜಿಲ್ಲೆಯ ಪ್ರಪ್ರಥಮ ಕ್ರೆಡಿಟ್ ಸಹಕಾರಿ ಸಂಸ್ಥೆಯಾಗಿ ಅದ್ವಿತೀಯ ಸಾಧನೆಯನ್ನು ಮಾಡಿದೆ. ಸಂಘವು ಹಮ್ಮಿಕೊಂಡಿರುವ ವಿಷನ್ 2025ರಂತೆ 2024–25ರ 31.03.2025 ವರ್ಷಾಂತ್ಯಕ್ಕೆ ಈ ಸಾಧನೆಯ ಗುರಿಯನ್ನು ಹಮ್ಮಿಕೊಂಡಿದ್ದು, ಅದನ್ನು 2024–25ನೇ ಸಾಲಿನಲ್ಲಿ ಸಾಕಷ್ಟು ಮುಂಚಿತವಾಗಿ ಮೊದಲ ತ್ರೈಮಾಸಿಕ ಅವಧಿಯಲ್ಲೇ ಸಾಧಿಸಲು ಸಾಧ್ಯವಾಗಿರುವುದಕ್ಕೆ ಅತ್ಯಂತ ಹರ್ಷವನ್ನು ವ್ಯಕ್ತಪಡಿಸುತ್ತಾ, ಸಂಘದ ಈವರೆಗಿನ ಸಾಧನೆಯ ಪ್ರಮುಖ ಅಂಶಗಳು ಈ ಕೆಳಗಿನಂತಿದೆ. ಈ ಸಾಧನೆಗೆ ಸಹಕರಿಸಿದ ಸಂಘದ ಎಲ್ಲಾ ನಿರ್ದೇಶಕರಿಗೆ, ಶಾಖಾಧಿಕಾರಿಗಳಿಗೆ, ಸಿಬ್ಬಂದಿಗಳಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರು, ಸದಸ್ಯರುಗಳಿಗೆ ಮತ್ತು ಸರ್ವಸದಸ್ಯ ಬಾಂಧವರಿಗೆ ಹಾಗೂ ಹಿತೈಷಿಗಳಿಗೆ ಈ ಮೂಲಕ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

### ಜೂನ್ 2023ಕ್ಕೆ ಹೋಲಿಸಿದಲ್ಲಿ ಜೂನ್ 2024ಕ್ಕೆ ಆಗಿರುವ ಪ್ರಗತಿಯ ಪಕ್ಷಿನೋಟ

| ಕ್ರ ಸಂ. | ಕಾರ್ಯ ವಿಭಾಗ | ಜೂನ್ 2023ಕ್ಕೆ ಇದ್ದಂತೆ | ಜೂನ್ 2024ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇಕಡಾವಾರು ವೃದ್ಧಿ |
|---|---|---|---|---|---|
| 1 | ಠೇವಣಾತಿಗಳು | ರೂ.462 ಕೋಟಿ | ರೂ.537 ಕೋಟಿ | ರೂ.75 ಕೋಟಿ | 16% |
| 2 | ಸಾಲ ಮತ್ತು ಮುಂಗಡ | ರೂ.392 ಕೋಟಿ | ರೂ.465 ಕೋಟಿ | ರೂ.73 ಕೋಟಿ | 19% |
| 3 | ಒಟ್ಟು ವ್ಯವಹಾರ | ರೂ.854 ಕೋಟಿ | ರೂ.1002 ಕೋಟಿ | ರೂ.148 ಕೋಟಿ | 17% |
| 4 | ನಿವ್ವಳ ಲಾಭ | ರೂ.1.60 ಕೋಟಿ | ರೂ.2.04 ಕೋಟಿ | ರೂ.44 ಲಕ್ಷ | 28% |
| 5 | ಅನುತ್ಪಾದಕ ಆಸ್ತಿ (Absolute) | ರೂ.157 ಲಕ್ಷ | ರೂ.45 ಲಕ್ಷ | – | – |
| 6 | ಶೇಕಡಾವಾರು | 0.40% | 0.10% | – | – |
| 7 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

- 31.03.2015ರಲ್ಲಿ ರೂ.205 ಕೋಟಿಯಿದ್ದ ಒಟ್ಟು ವ್ಯವಹಾರವು, ತದನಂತರದ 10ನೇ ವರ್ಷದ ಅವಧಿಯಲ್ಲಿ ಶೇ.400 ರಷ್ಟು ಅಂದರೆ ನಾಲ್ಕು ಪಟ್ಟು ಹೆಚ್ಚಳವನ್ನು ಕಂಡು, ಸಂಘವು 30.06.2024ಕ್ಕೆ ರೂ.1000 ಕೋಟಿ ಮೀರಿದ ವ್ಯವಹಾರವನ್ನು ಸಾಧಿಸಿರುವುದು. 31.03.2015ಕ್ಕೆ ನಿವ್ವಳ ಲಾಭವು ರೂ.3 ಕೋಟಿಯಷ್ಟಿದ್ದು ಇದು ಮಾರ್ಚ್ 2024 ಕ್ಕೆ ರೂ.12 ಕೋಟಿ ಮೀರಿರುವುದು.
- ಸಂಘದ ಸಾಧನೆಯ ಇತರ ಪ್ರಮುಖ ಅಂಶವೆಂದರೆ, ಕಳೆದ 17 ವರ್ಷಗಳಿಂದ ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣದಲ್ಲಿರುವುದು.
- ಸಂಘವು ಸ್ಥಾಪನೆಯಾದಂದಿನಿಂದ ಸದಸ್ಯರಿಗೆ ನಿರಂತರವಾಗಿ ಡಿವಿಡೆಂಡ್ ನೀಡುತ್ತಾ ಬಂದಿದ್ದು, 2022–23ನೇ ಸಾಲು ಸೇರಿದಂತೆ ಕಳೆದ 4 ವರ್ಷಗಳಿಂದ ಸದಸ್ಯರಿಗೆ ಗರಿಷ್ಠ ಶೇ.25 ರಷ್ಟು ಡಿವಿಡೆಂಡ್‌ನ್ನು ನೀಡುತ್ತಿರುವುದು.
- ಸದಸ್ಯರಿಗೆ ಗರಿಷ್ಠ ಶೇ.25 ರಷ್ಟು ಡಿವಿಡೆಂಡ್ ನೀಡುತ್ತಿರುವ ರಾಜ್ಯದ ಕೆಲವೇ ಕೆಲವು ಕ್ರೆಡಿಟ್ ಸಹಕಾರ ಸಂಘಗಳ ಪೈಕಿ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ಒಂದಾಗಿದೆ. ಸಂಘವು ಸರಕಾರದ ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ ಸತತವಾಗಿ "ಎ" ತರಗತಿ ಸಹಕಾರ ಸಂಘವಾಗಿ ವರ್ಗೀಕೃತವಾಗಿರುತ್ತದೆ.
- ವಿಷನ್ 2025 ರಂತೆ 31.03.2025ಕ್ಕೆ 30 ಶಾಖೆಗಳನ್ನು ಹೊಂದುವ ಗುರಿಯನ್ನು ಇಟ್ಟುಕೊಂಡಿದ್ದು, ಪ್ರಸ್ತುತ ಸಂಘವು ತನ್ನ ಕಾರ್ಯವ್ಯಾಪ್ತಿಯಾದ ಅವಿಭಜಿತ ದ.ಕ. ಜಿಲ್ಲೆಯಲ್ಲಿ ಒಟ್ಟು 25 ಶಾಖೆಗಳನ್ನು ಹೊಂದಿದ್ದು, 5 ಹೊಸ ಶಾಖೆಗಳನ್ನು ಬೆಳ್ತಾರೆ, ಸವಣೂರು, ಪಡೀಲ್, ಹಿರಿಯಡ್ಕ, ಕೋಟದಲ್ಲಿ ಅತೀ ಶೀಘ್ರದಲ್ಲಿ ಆರಂಭಿಸಿ, ಒಟ್ಟು ಶಾಖೆಯನ್ನು 30ಕ್ಕೆ ವಿಸ್ತರಿಸಲಾಗುವುದು.

- ♦ ಸಂಘದ ಕೇಂದ್ರ ಕಛೇರಿಗೆ ಮಂಗಳೂರಿನ ಕದ್ರಿ ಕಂಬಳ ರಸ್ತೆ ಇಲ್ಲಿ 37000 ಚ.ಅ.ಯಷ್ಟು ವಿಸ್ತೀರ್ಣದ ಸುಸಜ್ಜಿತ ಕಟ್ಟಡ ನಿರ್ಮಾಣದ ಕಾರ್ಯವು ಪ್ರಗತಿಯಲ್ಲಿದ್ದು, ಅದನ್ನು 2024ರ ಡಿಸೆಂಬರ್ ತಿಂಗಳಾಂತ್ಯದೊಳಗೆ ಲೋಕಾರ್ಪಣೆ ಮಾಡಲು ಉದ್ದೇಶಿಸಲಾಗಿದೆ.
- ♦ ಆಧುನಿಕ ತಂತ್ರಜ್ಞಾನ ಅಳವಡಿಕೆಯೊಂದಿಗೆ ಸಂಘದ ಸದಸ್ಯ ಗ್ರಾಹಕರಿಗೆ ಇನ್ನಷ್ಟು ಉತ್ತಮ ಸೇವೆಯನ್ನು ಲಭಿಸುವಂತಾಗಲು ಕ್ರಮವಿಡಲಾಗುತ್ತಿದೆ.
- ♦ ಸಂಘದ ನಿರಂತರ ಸಾಧನೆಗೆ ದ್ಯೋತಕವಾಗಿ ಆರು ಬಾರಿ ರಾಜ್ಯ ಮಟ್ಟದ ಮತ್ತು ಹನ್ನೆರಡು ಬಾರಿ ಜಿಲ್ಲಾ ಮಟ್ಟದ ಅತ್ಯುತ್ತಮ ಕ್ರೆಡಿಟ್ ಸಹಕಾರಿ ಸಂಸ್ಥೆಯಾಗಿ ರಾಜ್ಯ ಕರ್ನಾಟಕ ಸಹಕಾರ ಇಲಾಖೆಯಿಂದ, ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನಿಂದ ಪ್ರಶಸ್ತಿಗಳಿಗೆ ಅರ್ಹವಾಗಿರುತ್ತದೆ.

ಸಂಘವು ಸ್ಥಾಪನೆಯಾದಂದಿನಿಂದ, ಸಂಘದ ಮೇಲೆ ಪ್ರೀತಿ ವಿಶ್ವಾಸವನ್ನಿಟ್ಟು, ಸಂಘದ ಈ ಎಲ್ಲಾ ಪ್ರಗತಿ ಸಾಧನೆಗಳಿಗೆ ಕಾರಣಕರ್ತರಾಗಿ, ನಮಗೆ ಅಚಲವಾದ ಬೆಂಬಲವನ್ನು ನೀಡುತ್ತಿರುವ, ಎಲ್ಲಾ ಸದಸ್ಯ ಬಾಂಧವರಿಗೆ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

(ಕೆ. ಜೈರಾಜ್ ಬಿ. ರೈ)
ಅಧ್ಯಕ್ಷರು

*******

## ಸಂಘದ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ










ದಿನಾಂಕ 09.06.2024ರಂದು ಸಂಘದ ಎಲ್ಲಾ ಸಿಬ್ಬಂದಿಗಳಿಗೆ ವ್ಯಕ್ತಿತ್ವ ವಿಕಸನ, 194ಎ ಟಿಡಿಎಸ್ ಎಂಬ ವಿಷಯದ ಬಗ್ಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಜರುಗಿಸಲಾಗಿದ್ದು, ಈ ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ರವೀಂದ್ರನಾಥ್ ಜಿ. ಹೆಗ್ಡೆ ಹಾಗೂ ಶ್ರೀ ಕುಂಬ್ರ ದಯಾಕರ ಆಳ್ವ ಇವರುಗಳು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ತರಬೇತು ಸಂಸ್ಥೆ ಮೆ. ಮಾಸ್ಟರ್ ಮೈಂಡ್ ಎಂಟರ್‌ಪ್ರೈಸಸ್‌ನ ಸಂಚಾಲಕರಾದ ಶ್ರೀ ಶ್ರೀಶಾ ಎಂ.ಕೆ., ಸಂಘದ ಚಾರ್ಟರ್ಡ್ ಅಕೌಂಟೆಂಟ್‌ಗಳಾದ ಸಿ.ಎ. ಶ್ರೀಮತಿ ಸುಜಯ ಡಿ. ಆಳ್ವ, ಸಿ.ಎ. ಶ್ರೀ ಸುದೇಶ್ ಕುಮಾರ್ ರೈ ಬಿ., ಸಿ.ಎ. ವೃಂದ ಕುನಾರ್ ಹಾಗೂ ಸಂಘದ ಸಾಫ್ಟ್‌ವೇರ್ ಪ್ರೊವೈಡರ್‌ಗಳಾದ ಮೆ. ಅಟೋಮೇಷನ್ ಕ್ಲೌಡ್ ಸೊಲ್ಯೂಷನ್‌ನ ಶ್ರೀ ಸುರೇಶ್ ಮತ್ತು ಶ್ರೀ ಶೈಲೇಶ್ ಇವರು ತರಬೇತಿ ವಿಷಯಗಳ ಬಗ್ಗೆ ಉಪನ್ಯಾಸವನ್ನು ನೀಡಿದರು. ಸಂಘದ ಎಲ್ಲಾ ಸಿಬ್ಬಂದಿಗಳು ಈ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಶಾಖಾ ವ್ಯವಸ್ಥಾಪಕರ ಸಭೆ







ದಿನಾಂಕ 17.06.2024 ರಂದು 2024–25ನೇ ಸಾಲಿನ ಗುರಿ ನಿಗದಿ ಬಗ್ಗೆ ಶಾಖಾಧಿಕಾರಿಗಳೊಂದಿಗೆ ಸಮಾಲೋಚನಾ ಸಭೆ ಜರುಗಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ವಹಿಸಿದರು. ಸಂಘದ ನಿರ್ದೇಶಕರುಗಳಾದ ಡಾ। ಸುಭಾಶ್ಚಂದ್ರ ಶೆಟ್ಟಿ, ಶ್ರೀ ಯಂ. ರಾಮಯ ಶೆಟ್ಟಿ, ಶ್ರೀ ಪಿ.ಬಿ. ದಿವಾಕರ ರೈ, ಶ್ರೀ ಕುಂಬ್ರ ದಯಾಕರ ಆಳ್ವರವರು ಉಪಸ್ಥಿತರಿದ್ದರು. ಸಂಘದ ಮಹಾಪ್ರಬಂಧಕರು, ಶಾಖಾಧಿಕಾರಿಗಳು ಹಾಗೂ ಕೇಂದ್ರ ಕಛೇರಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪಾಲ್ಗೊಂಡಿದ್ದರು.

## ಅಭಿನಂದನೆಗಳು


ಸಂಘದ ಶಿರ್ವ ಶಾಖೆಯ ಸಿಬ್ಬಂದಿ ಚಿ। ಭರತ್ ಎಸ್. ರವರ ವಿವಾಹವು ಚಿ। ಸೌ। ಪ್ರಣಾಮ್ಯ ಶೆಟ್ಟಿರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

## ಹುಟ್ಟು ಹಬ್ಬದ ಶುಭಾಶಯಗಳು

ಶ್ರೀಮತಿ ಲಕ್ಷ್ಮೀ ಜೆ. ಶೆಟ್ಟಿ – ಉಪಾಧ್ಯಕ್ಷರು
ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ – ನಿರ್ದೇಶಕರು
ಸವಣೂರು ಶ್ರೀ ಕೆ. ಸೀತಾರಾಮ ರೈ – ನಿರ್ದೇಶಕರು

| ಸಿಬ್ಬಂದಿಗಳ ಹೆಸರು | ಶಾಖೆ | ಸಿಬ್ಬಂದಿಗಳ ಹೆಸರು | ಶಾಖೆ |
|---|---|---|---|
| ಶ್ರೀ ತಿಮ್ಮಯ್ಯ ಶೆಟ್ಟಿ | ಮುಡಿಪು | ಶ್ರೀ ಸುರೇಶ್ ನ್ಯಾಕ್ | ಮೂಡಬಿದ್ರಿ |
| ಶ್ರೀ ದಿನೇಶ್ ರೈ | ಕೇಂದ್ರ ಕಛೇರಿ | ಶ್ರೀಮತಿ ಮಮತಾ ಎಮ್. | ಮಂಗಳೂರು |
| ಶ್ರೀ ವಿರಾಜ್ ಜೆ. ಶೆಟ್ಟಿ | ಬ್ರಹ್ಮಾವರ | ಶ್ರೀ ಮೋಹನ್ | ಉಡುಪಿ |
| ಶ್ರೀ ಪ್ರವೀಣ್ ರೈ | ಕಡಬ | ಶ್ರೀಮತಿ ಶ್ವೇತಾ | ಕೇಂದ್ರ ಕಛೇರಿ |
| ಶ್ರೀ ಜಯರಾಮ್ | ಬೈಂದೂರು | ಶ್ರೀಮತಿ ಶ್ರೀಲಕ್ಷ್ಮಿ | ಸುರತ್ಕಲ್ |
| ಶ್ರೀ ಸುಧೀರ್ ಕುಮಾರ್ | ಚಿಲಿಂಬಿ | ಶ್ರೀಮತಿ ಸುಶ್ಮಿತಾ ಖಾರ್ವಿ | ಬ್ರಹ್ಮಾವರ |
| ಶ್ರೀ ಚಂದ್ರಹಾಸ ಶೆಟ್ಟಿ | ಪುತ್ತೂರು | ಕು। ಸುಮತಿ | ಬಿ.ಸಿ.ರೋಡ್ |
| ಶ್ರೀ ಸುಭ್ರತ್ | ಹೆಬ್ರಿ | ಶ್ರೀಮತಿ ವಿದ್ಯಶ್ರೀ ಜಿ.ಎಸ್. | ಮುಡಿಪು |
| ಶ್ರೀ ದಿತೇಶ್ ಶೆಟ್ಟಿ | ವಿಟ್ಲ | ಶ್ರೀ ನವೀನ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀಮತಿ ಮಮತಾ ಹೆಚ್. | ಬೆಳ್ತಂಗಡಿ | ಶ್ರೀಮತಿ ಅರುಣಾ ಆರ್. ರೈ | ತೊಕ್ಕೊಟ್ಟು |
| ಶ್ರೀ ಅಶೋಕ್ ಎಂ.ಕೆ | ಮೂಡಬಿದ್ರಿ | ಶ್ರೀ ಅಮಿತ್ ಕುಮಾರ್ | ಕೈಕಂಬ |
| ಶ್ರೀಮತಿ ಅಶ್ವಿನಿ ಡಿ. ರೈ | ಮಂಗಳೂರು | ಕು। ಅಪೂರ್ವ | ವೆಲೆನ್ಸಿಯಾ |
| ಶ್ರೀ ಲಜಿತ್ ಶೆಟ್ಟಿ ಬಿ. | ಹಂಪನಕಟ್ಟೆ | | |

## ಭಾವಪೂರ್ಣ ಶ್ರದ್ಧಾಂಜಲಿ



ಯು. ತಾರನಾಥ ಆಳ್ವ

ಶ್ರೀಯುತ ಯು. ತಾರನಾಥ ಆಳ್ವರವರು ನಮ್ಮ ಸಂಘದಲ್ಲಿ 2000 ರಿಂದ 2010ರ ತನಕ ನಿರ್ದೇಶಕರಾಗಿ 2004ರಿಂದ 2010ರ ತನಕ ಉಪಾಧ್ಯಕ್ಷರಾಗಿ ನಿಸ್ವಾರ್ಥ ಸೇವೆ ಸಲ್ಲಿಸಿ, ಸಂಘದ ಸರ್ವತೋಮುಖ ಪ್ರಗತಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವರು. ಅಗಲಿದ ಅವರ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಕೋರಿಕೊಂಡು ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ.

## ಕವನಗಳು

### ತುಳ್‌ನಾಡ್‌ದ ಪೊರ್ಲು–ತಿರ್ಲ್

ತುಳುನಾಡ್‌ದ ಐಸಿರ ಅರಳೊಂದು
ಬರ್ಪಿನ ಪೊರ್ಲು,
ತುಳುವಪ್ಪೆ ಮಟ್ಟೆಲ್‌ದ
ತುಳು ಸಂಸ್ಕೃತಿದ ತಿರ್ಲ್,
ದೈವ–ದೇವೆರೆಗ್ ನಿಲೆ,
ನಾಗಬ್ರಹ್ಮ ಭೂತೊಲೆಗ್ ನೆಲೆ.
ಪನೋಳಿ ಪತ್ತುನ ಮರಿಯಾಲ,
ಕಂಡ ಸಾಗೊಳಿದ ಐಸಿರಿಲಾ .......
ಬಿರ್ದ್‌ದ ಬೀರೆರ್ ಬದ್‌ಕ್‌ನ
ಕಾರ್ನಿಕದ ಬೂಡು ಉಂದು,

ಗರ್ದ್‌ದ ಕಂಬುಳ – ಕಟ್ಟದ
ತುಳುನಾಡ್ ಉಂದು.
ಗಗ್ಗರಕಟ್ಟ್‌ದ್‌ದೈವ ಮೆರೆಯಿನ,
ಸತ್ಯಧರ್ಮ ನೆಲೆ ಉಂತಿನ,
ತುದೆ ನೀರ್‌ದಿಂಜಿದ್ ಪರಪುನ,
ಉಂದ್ ಬಂಗಾರ್ದ ತುಳುನಾಡ್.
ಸಿಂಗಾರದ ತುಳುನಾಡ್.
ಪೊರ್ಲು – ಪೊರ್ಲುಏತೊಂಜಿ ಪೊರ್ಲು.
ತುಳುನಾಡ ಸಂಸ್ಕೃತಿ ಐಸಿರದ ತಿರ್ಲ್.

**ಶ್ರೀಮತಿ ಅಶ್ವಿತಾ ಎಂ.**
ಸಿಬ್ಬಂದಿ, ಕಡಬ ಶಾಖೆ.

### ಕಾಣದ ಕಡಲು

॥ ಕಾಣದ ಕಡಲಿಗೆ ಮನಸಿನ ಹಂಬಲ
ಕಾಡುವ ಕನಸಿಗೆ ಹೃದಯದ ತಳಮಳ ॥ಪ॥

ಎಲ್ಲೋ ದೂರಕೆ ಹಾರಿದೆ ಮನವು
ತನ್ನ ಸುತ್ತಲ ಜಗವ ಬಿಟ್ಟು,
ಕನಸಿನ ಲೋಕವ ಅರಸುವೆ ಏತಕೆ?
ಕಳೆದಿದೆ ಎಲ್ಲೋ ಅಲ್ಲೇ ಹುಡುಕು.

ಆಸೆ ಎಂಬುದು ಮಾಯಾಮೃಗವು
ಕೈಗೆಸಿಲುಕದ ಬಿಸಿಲು ಕುದುರೆ,
ದೂರದ ಬೆಟ್ಟವು ನೋಡಲು ನುಣ್ಣಗೆ
ಏರಿ ಇಳಿಯಲು ದಾರಿ ಸಿಗದು.

ನಾಳೆ ಎಂಬುದು ಶೂನ್ಯ ಕನಸು
ಇಂದೇ ಕಾಣಿರೋ ಸುಖದ ಬದುಕು.
ಕೈಗೆ ಎಟುಕದ ದ್ರಾಕ್ಷಿ ಹುಳಿಯು
ಸಿಗದ ಹಣ್ಣಿನ ಆಸೆ ಏತಕೆ ?

ನಾಲ್ಕು ದಿನದ ನಮ್ಮೀ ಬದುಕು
ಸ್ವರ್ಗ ನರಕವು ಎರಡು ಇಲ್ಲೇ
ಕಾಣದ ಕಡಲೊಳು ಕಾಡುವ ಕನಸನು
ಹುಡುಕುತ ಸಾಗುವ ನಿತ್ಯ ನಿರಂತರ ॥ಪ॥

**ಶ್ರೀ ಧನಂಜಯ್ ಕುಮಾರ್**
ಸಿಬ್ಬಂದಿ, ಮುಲ್ಕಿ ಶಾಖೆ.

Private Circulation only

**BOOK POST**

To ..............................................................................

..............................................................................

..............................................................................

If not delivered please return to **SRI RAMAKRISHNA CREDIT CO-OPERATIVE SOCIETY LTD.,**
2nd Floor, Amruthothsav Building, Bunts Hostel Circle, Mangalore – 575 003.